ಶ್ರೀ ಎಂ.ಎಸ್. ಪಾಟೀಲ್ :— ತರಿಸಿಕೊಡುತ್ತೇನೆ.

ಉಡುಪಿ ಹಾಗೂ ಕುಂದಾಪುರ ತಾಲ್ಲೂಕಿನಲ್ಲಿ ಮಂಜೂರಾಗಿರುವ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳು.

173(1219) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಮತ್ತು ಕುಂದಾಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಮಂಜೂರಾದ ಮೆಟ್ರಿಕ್‌ಪೂರ್ವ ಮತ್ತು ನಂತರದ ವಿದ್ಯಾರ್ಥಿನಿಲಯಗಳು ಯಾವುವು? (ತಾಲ್ಲೂಕುವಾರು ವಿವರ);

2) ಕುಂದಾಪುರ ತಾಲ್ಲೂಕಿನ ಮಾರ್ಪಾಡಿಯಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಮಂಜೂರಾಗಿರುವುದಿಲ್ಲ.

ಆ) ಆಯವ್ಯಯ ಲಭ್ಯತೆ ಹಾಗೂ ಅವಶ್ಯಕತೆಯನ್ನು ಅನುಸರಿಸಿ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಉಡುಪಿ ತಾಲ್ಲೂಕು ಮತ್ತು ಕುಂದಾಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಮಂಜೂರಾದ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿನಿಲಯಗಳು ಯಾವುವು ಎಂಬ ಪ್ರಶ್ನೆಗೆ ಮಂಜೂರಾಗಿರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸೌಲಭ್ಯವನ್ನು ಕೊಡುವಾಗ ರಾಜಕೀಯ ಮಾನದಂಡವನ್ನು ಉಪಯೋಗ ಮಾಡಬಾರದು. ಆದರೆ ನಾವು ಇಲ್ಲಿ ಮಾತನಾಡುವ ರೀತಿ ನೀತಿ, ಪ್ರಾಮಾಣಿಕತೆಯನ್ನು ನೋಡಿದಾಗ ಅದು ಎಷ್ಟರಮಟ್ಟಿಗೆ ಸಮಂಜಸವೆಂದು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ಕೊಡುವ ಸೌಲಭ್ಯವನ್ನೂ ಸಹ ರಾಜಕೀಯ ಮಾನದಂಡವನ್ನು ಉಪಯೋಗ ಮಾಡಿ ಕೊಡುವುದಾದರೆ ನಾವು ಅಲ್ಲಿ ಮಾತನಾಡುವುದು ಅರ್ಥಹೀನವೆಂದು ಹೇಳಬೇಕಾಗುತ್ತದೆ. ತಾವು ಯಾವ ನೆಲೆಯಿಂದ ಸೌಲಭ್ಯವನ್ನು ಮಂಜೂರಾತಿ ಮಾಡುತ್ತೀರಿ? ನಾವೇನೂ ಬೇಡಿಕೆಯನ್ನು ಕೊಟ್ಟಿಲ್ಲವೆ? ತಮ್ಮ ಇಲಾಖಾಧಿಕಾರಿಗಳು ತಮಗೆ ಬೇಡಿಕೆ ಸಲ್ಲಿಸಿಲ್ಲವೆ? ಇದರ ಬಗ್ಗೆ ಉತ್ತರವನ್ನು ಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಯಾವುದೇ ರಾಜಕೀಯ ಮಾನದಂಡವನ್ನು ಯಾವುದೇ ರಾಜಕೀಯ ಪಕ್ಷವಿದ್ದರೂ ಸಹ ತೆಗೆದುಕೊಳ್ಳುವುದಿಲ್ಲ. ಅವಶ್ಯಕತೆ ಇರುವ ಕಡೆ ಜಿಲ್ಲಾಪಂಚಾಯಿತಿಗಳಿಂದ ಮಾಹಿತಿ ಬಂದಾಗ ಆಯಮ್ಯಯವಿದ್ದಾಗ ಮಂಜೂರಾತಿಯನ್ನು ಕೊಡುತ್ತೇವೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಾವೇನು ಸಂಖ್ಯಾಬಲವನ್ನು ಹೆಚ್ಚು ಮಾಡಿದ್ದೆವೋ ಅಷ್ಟು ಸಂಖ್ಯೆಯ ವಿದ್ಯಾರ್ಥಿಗಳೇ ಬರುತ್ತಿಲ್ಲ. ಎಷ್ಟೋ ವಿದ್ಯಾರ್ಥಿನಿಲಯಗಳಲ್ಲಿ ಕೇವಲ ಹತ್ತು ಮಂದಿ ವಿದ್ಯಾರ್ಥಿಗಳಿದ್ದಾರೆ. ಬೇಕಾದರೆ ತಮಗೆ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ :— ತಾವು ಆ ರೀತಿ ಒಂದು ವಿದ್ಯಾರ್ಥಿನಿಲಯದ ಹೆಸರು ಹೇಳಿ. ಸುಮ್ಮನೆ ಸಾರಾಸಗಟಾಗಿ ಆ ರೀತಿ ಆಪಾದನೆ ಮಾಡುವುದು ಸರಿಯಲ್ಲ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ರಾಜಕಾರಣದ ದೃಷ್ಟಿಯಿಂದ ಅಲ್ಲಿ ಮಂಜೂರಾತಿಯನ್ನು ತಡೆಹಿಡಿದಿಲ್ಲ. ಅಲ್ಲಿ ಅವಶ್ಯಕತೆ ಇದ್ದರೆ ಈ ಸಾಲಿನಲ್ಲೇ ಮಂಜೂರಾತಿಯನ್ನು ಕೊಡುತ್ತೇನೆ. ರಾಜಕಾರಣದ ಪ್ರಶ್ನೆಯನ್ನು ಇಲ್ಲಿ ಹೇಳುವುದು ಒಳ್ಳೆಯದಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ :— ನಾನು ಸರ್ಕಾರದ ವಿರುದ್ಧ ಆಪಾದನೆ ಮಾಡುತ್ತಿಲ್ಲ. ನಾನು ನಮ್ಮ ವ್ಯವಸ್ಥೆಯ ವಿರುದ್ಧ ಮಾತನಾಡುತ್ತಿದ್ದೇನೆ. ಹಿಂದೆ ಇದ್ದಂಥ ಸರ್ಕಾರ ಅದೇ ಮಾಡಿರಬಹುದು, ಮುಂದೆ ಬರತಕ್ಕ ಸರ್ಕಾರ ಸಹ ಅದೇ ಮಾಡಬಹುದು. ಆದರೆ ನಾವು ಇಲ್ಲಿ ಮಾತನಾಡುವ ರೀತಿ ನೀತಿ, ಬಜೆಟ್ ಮೇಲೆ ಭಾಷಣ ಮಾಡುವಾಗ, ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಅನುಸರಿಸುವ ಪ್ರಾಮಾಣಿಕತೆ ಮುಂತಾದವುಗಳು ಅರ್ಥಪೂರ್ಣವಾಗಬೇಕಾದರೆ ಅದು ಸರಿಯಾಗಿ ಕಾರ್ಯರೂಪಕ್ಕೆ ಬರಬೇಕು. ನಾನು ಇದರ ಬಗ್ಗೆ ಕೇಳಿಲ್ಲವೆಂದು ತಾವು ಹೇಳಿದ್ದೀರಿ. ನಾವು ಪ್ರತಿ ವರ್ಷ ಇದರ ಬಗ್ಗೆ ಕೇಳಿಕೊಂಡು ಬಂದಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ತಾವು ನನ್ನ ಕೊಠಡಿಗೆ ಬನ್ನಿ ಇದರ ಬಗ್ಗೆ ಚರ್ಚೆ ಮಾಡೋಣ. ಖಂಡಿತವಾಗಿ ಅವಶ್ಯಕತೆ ಇದ್ದರೆ ಎರಡು ಮೂರು ದಿವಸಗಳಲ್ಲಿ ಮಂಜೂರಾತಿ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ನಾನು ಏಕೆ ಈ ಆಪಾದನೆಯನ್ನು ಮಾಡುತ್ತಿದ್ದೇನೆಂದರೆ, ಹೋದ ಸಲ ಹೈಸ್ಕೂಲ್ ಮುಂಜೂರು ಮಾಡುವಾಗ ನಮಗೆ ಕೊಟ್ಟಿಲ್ಲ. ಆರೋಗ್ಯ ಇಲಾಖೆಯವರು ಇದುವರೆಗೂ ಸಹ ನಮ್ಮ ಕ್ಷೇತ್ರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಲ್ಲ. ತಾವೂ ಸಹ ಏನನ್ನು ಕೊಟ್ಟಿಲ್ಲ. ಆದ್ದರಿಂದ ರಾಜಕೀಯ ಕನ್ನಡಕವನ್ನು ಹಾಕಿಕೊಂಡು ನೋಡುತ್ತಿದ್ದರೆ ನಮ್ಮಂಥವರಿಗೆ ಕಷ್ಟವಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ವಿದ್ಯಾರ್ಥಿ ನಿಲಯಗಳ ಮಂಜೂರಾತಿ ವಿಷಯದಲ್ಲಿ ಆದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಂಜೂರಾತಿಗೆ ಸಂಬಂಧಪಟ್ಟಂತೆ ಯಾವುದೇ ರಾಜಕೀಯತೆಯಿಂದ ತಡೆಹಿಡಿದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ನಾನು ಹೇಳುವುದು ಒಂದು ತಾವು ಹೇಳುವುದು ಮತ್ತೊಂದು ಆಗಿದೆ. ನಾವು ಬೇಡಿಕೆಯನ್ನು ಕೊಟ್ಟಿದ್ದೇವೆ, ಜಿಲ್ಲಾಪಂಚಾಯಿತಿಯಿಂದ ಶಿಫಾರಸ್ಸು ಬಂದಿದೆ, ಆದರೂ ಸಹ ತಾವು ಇದಕ್ಕೆ ಮಂಜೂರಾತಿಯನ್ನು ಕೊಡುತ್ತಿಲ್ಲ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ತಾವು ನನ್ನ ಕೊಠಡಿಗೆ ಬನ್ನಿ ಇದರ ಬಗ್ಗೆ ಚರ್ಚೆ ಮಾಡೋಣ.

ಶಿಡ್ಲಘಟ್ಟ ಪಟ್ಟಣಕ್ಕೆ ಒಳಚರಂಡಿ ಯೋಜನೆ.

174(1279) ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿಡ್ಲಘಟ್ಟ ನಗರಕ್ಕೆ ಒಳಚರಂಡಿ ಯೋಜನೆ ಮಂಜೂರಾತಿಯಾಗಿದೆಯೇ?

2. ಮಂಜೂರಾಗಿದ್ದಲ್ಲಿ ಈ ಕಾಮಗಾರಿಗೆ ಪುರಸಭೆಯಿಂದ ವಂತಿಗೆ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ಪಡೆಯಲಾದ ವಂತಿಗೆ ಎಷ್ಟು?

3. ಸದರಿ ಕಾಮಗಾರಿಯು ಇದುವರೆಗೂ ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಮಂಜೂರಾತಿ ಆಗಿರುವುದಿಲ್ಲ.

2. ಹೌದು

ಪುರಸಭೆಯವರು ರೂ. 19.33 ಲಕ್ಷಗಳನ್ನು ಪಾವತಿಸಿದ್ದಾರೆ.

3. ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪರಿಶೀಲನೆಯಲ್ಲಿರುವುದರಿಂದ ಕಾಮಗಾರಿಯು ಇನ್ನೂ ಪ್ರಾರಂಭವಾಗಿರುವುದಿಲ್ಲ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಶಿಡ್ಲಘಟ್ಟ ನಗರಕ್ಕೆ ಒಳಚರಂಡಿ ಯೋಜನೆ ಮಂಜೂರಾತಿಯಾಗಿದೆಯೇ ಎಂಬ ನನ್ನ ಪ್ರಶ್ನೆಗೆ ಮಂಜೂರಾತಿ ಆಗಿಲ್ಲವೆಂದಿದ್ದಾರೆ. ಮಂಜೂರಾಗಿದ್ದಲ್ಲಿ ಈ ಕಾಮಗಾರಿಗೆ ಪುರಸಭೆಯಿಂದ ವಂತಿಗೆ ಪಡೆಯಲಾಗಿದೆಯೇ ಎಂಬುದಕ್ಕೆ ಪುರಸಭೆಯವರು 19.33 ಲಕ್ಷ ರೂ.ಗಳನ್ನು ಪಾವತಿಸಿದ್ದಾರೆಂದು ಹೇಳುತ್ತಾರೆ. ಮೊದಲ ಪ್ರಶ್ನೆಯಲ್ಲಿ ಮಂಜೂರಾತಿಯೇ ಆಗಿಲ್ಲವೆಂದು ಹೇಳುತ್ತಾರೆ. ಕೆಳಗಡೆ ಮಂಜೂರಾಗಿದೆಯೆಂದು ಹೇಳುತ್ತಾರೆ. ದಯಮಾಡಿ ಇದರ ಬಗ್ಗೆ ವಿವರಣೆ ಕೊಡಬೇಕು.